


ಸಂಪುಟ: 8 ಜುಲೈ – ಡಿಸೆಂಬರ್ 2017 ಸಂಚಿಕೆ: 2

## ವಿಶ್ವ ಸ್ತನ್ಯಪಾನ ಸಪ್ತಾಹ–2017



ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಹೋಬಳಿಯ ಪಟ್ರೇಹಳ್ಳಿ ಗ್ರಾಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಇವರ ವತಿಯಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಆರೋಗ್ಯ ಇಲಾಖೆಗಳ ಸಹಯೋಗದೊಂದಿಗೆ ದಿನಾಂಕ 09–07–2017 ರಂದು “ವಿಶ್ವ ಸ್ತನ್ಯಪಾನ ಸಪ್ತಾಹ–2017” ನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ.ಟಿ.ಎಸ್.ಸುಕನ್ಯ ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಸ್ತನ್ಯಪಾನದ ಪ್ರಾಮುಖ್ಯತೆ ಮತ್ತು ಸ್ವಚ್ಛತೆ ಕಾಯ್ದುಕೊಳ್ಳುವ ಬಗ್ಗೆ ಮಾತನಾಡಿದರು. ಶ್ರೀಮತಿ ರೂಪಾ ಬಿ. ಪಾಟೀಲ್ ವಿಜ್ಞಾನಿ ಇವರು ವಿಶ್ವ ಸ್ತನ್ಯಪಾನ ಸಪ್ತಾಹದ ಆಚರಣೆಯ ಧ್ಯೇಯೋದ್ದೇಶ, ತಾಯಿ ಹಾಲಿನಲ್ಲಿರುವ ಪೋಷಕಾಂಶಗಳು ಮತ್ತು ಬಾಣಂತಿಯ ಪೌಷ್ಟಿಕ ಆಹಾರದ ಬಗ್ಗೆ ವಿವರಿಸಿದರು. ಆರೋಗ್ಯ ಇಲಾಖೆಯ ಶ್ರೀಮತಿ ಮಧುಮತಿ ಮಾತನಾಡಿ ತಾಯಿ ಹಾಲು ನೀಡುವುದರಿಂದ ಮಗುವಿನಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುವುದು ಮತ್ತು ತಾಯಿಗೆ ಆಗುವ ಲಾಭಗಳ ಬಗ್ಗೆ ವಿವರಿಸಿದರು. ಶ್ರೀಮತಿ ಲೀಲಾಬಾಯಿ ಮೇಲ್ವಿಚಾರಕರು ಇವರು ಮಾತನಾಡಿ ಮಗುವಿನ ಆರೋಗ್ಯ ವೃದ್ಧಿಸಲು ತಾಯಿ ಹಾಲು ಅತ್ಯವಶ್ಯಕ ಎಂದರು, ಇಲಾಖೆಯಿಂದ ದೊರೆಯುವ ಯೋಜನೆಗಳ ಪ್ರಯೋಜನವನ್ನು ಪಡೆದುಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ತಾಯಂದಿರಿಗೆ ಹೇಳಿದರು. ಗ್ರಾ.ಪಂ. ಸದಸ್ಯರಾದ ಶ್ರೀಯುತ ಪುಟ್ಟಶಂಕರಪ್ಪ ಇವರು ಮಗುವಿನ ಸರ್ವತ್ತೋಮುಖ ಬೆಳವಣಿಗೆಗೆ ತಾಯಿ ಹಾಲು ಅವಶ್ಯಕ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ 55 ರೈತ ಮಹಿಳೆಯರು, ತಾಯಂದಿರು, ಸ್ತ್ರೀಶಕ್ತಿ ಸದಸ್ಯರು, ಕಿರಿಯ ಆರೋಗ್ಯ ಸಹಾಯಕಿ ಶ್ರೀಮತಿ ವಿಶಾಲ, ಮುಖ್ಯೋಪಾದ್ಯಾಯರಾದ ಶ್ರೀಯುತ ಬಸವರಾಜು, ಶಿಕ್ಷಕರಾದ ಶ್ರೀಧರಾಚಾರ್, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಕ್ಷೇತ್ರ ಪರಿವೀಕ್ಷಕರಾದ ಪೂಜಾ.ಬಿ ರವರು ಪಾಲ್ಗೊಂಡಿದ್ದರು.

## ತೆಂಗಿನಲ್ಲಿ ಸಮಗ್ರ ಬೆಳೆ ನಿರ್ವಹಣೆ ಹಾಗೂ ಮರ ಹತ್ತುವ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ



ಕೃಷಿ ವಿಜ್ಞಾನ ಕೇಂದ್ರ ಕೊನೇಹಳ್ಳಿ ವತಿಯಿಂದ ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಯೋಜನೆಯ ರೈತರ ಆಧಾಯ ಮತ್ತು ಕಲ್ಯಾಣಾಭಿವೃದ್ಧಿ ಕಾರ್ಯಕ್ರಮದಡಿ ದತ್ತು ಗ್ರಾಮವಾದ ತಿಪಟೂರು ತಾಲ್ಲೂಕಿನ ಹುಲುಕಟ್ಟೆ ಕೊಪ್ಪ ಗ್ರಾಮದ ರೈತರಿಗೆ ದಿನಾಂಕ: 09–08–2017 ರಿಂದ 11–08–2017 ರವರಗೆ ತೆಂಗಿನಲ್ಲಿ ಸಮಗ್ರ ಬೆಳೆ ನಿರ್ವಹಣೆ ಹಾಗೂ ಮರ ಹತ್ತುವ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ತೆಂಗಿನಲ್ಲಿ ಸಮಗ್ರ ಬೆಳೆ, ಪೋಷಕಾಂಶ ರೋಗ ಮತ್ತು ಪೀಡೆ ನಿರ್ವಹಣೆ ಹಾಗೂ ಮೌಲ್ಯವರ್ಧನೆ ಕುರಿತು ಪ್ರಾತ್ಯಕ್ಷಿಕೆ ಮುಖಾಂತರ ತರಬೇತಿ ನೀಡಲಾಯಿತು. ತೆಂಗಿನ ಮರ ಹತ್ತುವ ಯಂತ್ರ ಉಪಯೋಗಿಸಿ ಕಾಯಿ ಕೀಳುವುದು, ಮರದ ಶುಚಿತ್ವ ಹಾಗೂ ರೋಗ ಕೀಟಗಳನ್ನು ನಿರ್ವಹಿಸುವ ಕುರಿತು ಸಹ ತರಬೇತಿ ನೀಡಲಾಯಿತು. ಈ ಕಾರ್ಯಕ್ರಮವನ್ನು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಟಿ.ಎಸ್.

ಸುಕನ್ಯ, ಇತರೆ ವಿಜ್ಞಾನಿಗಳಾದ ಡಾ. ನಾಗಪ್ಪ ದೇಸಾಯಿ, ಡಾ. ಶ್ರೀನಿವಾಸ್, ಡಾ. ಶಂಕರ ಎಂ. ಹೆಚ್., ಡಾ. ಮಮತಾ ಮತ್ತು ಯೋಜನೆಯ ತಾಂತ್ರಿಕ ಸಲಹೆಗಾರರಾದ ಚೇತನ್, ಕ್ಷೇತ್ರ ಪರಿವೀಕ್ಷಕರಾದ ಹರೀಶ್ ಮತ್ತು ಕರಿಯಪ್ಪ ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ದತ್ತು ಗ್ರಾಮದ 25 ರೈತರಿಗೆ ತರಬೇತಿ ನೀಡಲಾಯಿತು.

## ವಿಶ್ವ ಜೇನು ದಿನ–2017



ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಹೋಬಳಿಯ ಪತ್ರೇಹಳ್ಳಿ ಗ್ರಾಮದಲ್ಲಿ ದಿನಾಂಕ 19–08–2017 ರಂದು ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಇವರ ವತಿಯಿಂದ "ವಿಶ್ವ ಜೇನು ದಿನ–2017" ನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಜೇನು ಕೃಷಿಯ ತಂತ್ರಜ್ಞರಾದ ಡಾ. ಭಾರ್ಗವ ರವರು ಕಾರ್ಯಕ್ರಮದ ಆಚರಣೆಯ ಧ್ಯೇಯೋದ್ದೇಶ, ಜೇನು ಸಾಕಾಣಿಕೆಯ ಉಪಯೋಗ, ಬೆಳೆ ಇಳುವರಿ ಅಧಿಕವಾಗುವ ಕುರಿತು ಪ್ರಾತ್ಯಕ್ಷಿಕೆ ಮುಖಾಂತರ ವಿವರಿಸಿದರು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳದ ಡಾ. ಶಂಕರ.ಎಮ್.ಹಚ್, ಡಾ. ಶ್ರೀನಿವಾಸ.ಕೆ.ಆರ್., ಡಾ. ಮಮತ .ಬಿ., ಡಾ.ಶಿವಪ್ಪನಾಯಕ , ಶ್ರೀಮತಿ ರೂಪ ಬಿ ಪಾಟೀಲ್, ಅರ್ಜುಮನ್ ಬಾನು, ಕ್ಷೇತ್ರ ಪರಿವೀಕ್ಷಕರಾದ ಪೂಜಾ.ಬಿ., ಗ್ರಾ.ಪಂ. ಸದಸ್ಯರಾದ ಶ್ರೀಯುತ ಪುಟ್ಟಶಂಕರಪ್ಪ ರವರು ಪಾಲ್ಗೊಂಡಿದ್ದರು ಮತ್ತು ಈ ಕಾರ್ಯಕ್ರಮದಲ್ಲಿ 60 ರೈತ/ರೈತ ಮಹಿಳೆಯರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಪ್ರಗತಿ ಪರ ರೈತರಾದ ಶ್ರೀಯುತ ನಾಗರಾಜು ರವರಿಗೆ ಜೇನು ಪೆಟ್ಟಿಗೆಯನ್ನು ವಿತರಿಸುವ ಮೂಲಕ ವಿಶ್ವ ಜೇನು ದಿನವನ್ನು ಆಚರಿಸಲಾಯಿತು.

## ಪಾರ್ಥೇನಿಯಂ ಜಾಗೃತಿ ಸಪ್ತಾಹ–2017



ದಿನಾಂಕ 19–08–2017 ರಂದು ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಹೋಬಳಿಯ ಪತ್ರೇಹಳ್ಳಿ ಗ್ರಾಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಇವರ ವತಿಯಿಂದ "ಪಾರ್ಥೇನಿಯಂ ಜಾಗೃತಿ ಸಪ್ತಾಹ–2017"ನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ಶ್ರೀನಿವಾಸ.ಕೆ.ಆರ್, ಭಾರತಕ್ಕೆ ಪಾರ್ಥೇನಿಯಂ ಗಿಡವು ಆಮದಾದ ಬಗ್ಗೆ ಹಾಗೂ ಅದರಿಂದಾಗುವ ದುಷ್ಪರಿಣಮಗಳನ್ನು ವಿವರಿಸಿದರು, ಕೇಂದ್ರದ ವಿಜ್ಞಾನಿಗಳಾದ ಡಾ. ಎಂ.ಹಚ್ ಶಂಕರ್ ಮಾತನಾಡಿ ಇಂತಹ ನಿಯಂತ್ರಣ ಸಪ್ತಾಹಗಳನ್ನು ಆಚರಿಸುವುದರಿಂದ ಜನಸಮುದಾಯದಲ್ಲಿ ಅರಿವು ಮೂಡಿಸಿ ಪಾರ್ಥೇನಿಯಂ ನಿರ್ಮೂಲನೆಗೆ ಹೆಚ್ಚು ಒತ್ತು ನಿಡಬೇಕೆಂದರು. ಕೇಂದ್ರದ ಮಣ್ಣು ವಿಜ್ಞಾನಿಗಳಾದ ಡಾ. ಮಮತ ಬಿ. ಪಾರ್ಥೇನಿಯಂ ಗಿಡವನ್ನು ಭೌತಿಕ, ಜೈವಿಕ ಹಾಗೂ ರಾಸಾಯನಿಕವಾಗಿ ನಿಯಂತ್ರಣ ಮಾಡುವ ವಿಧಾನವನ್ನು ವಿವರಿಸಿದರು. ಡಾ.ಶಿವಪ್ಪನಾಯಕ ಮಾತನಾಡಿ, ಪಾರ್ಥೇನಿಯಂ ಗಿಡದಿಂದ ದನಕರುಗಳಲ್ಲಿ ಬರುವ ರೋಗ ಲಕ್ಷಣ ಹಾಗೂ ನಿಯಂತ್ರಣ ಕ್ರಮಗಳನ್ನು ಪರಿಚಯಿಸಿದರು. ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳಾದ, ಶ್ರೀಮತಿ ರೂಪ ಬಿ. ಪಾಟೀಲ್, ಅರ್ಜುಮನ್ ಬಾನು, ಪೂಜಾ.ಬಿ. ರವರು ಉಪಸ್ಥಿತರಿದ್ದರು. ಮತ್ತು ಈ ಕಾರ್ಯಕ್ರಮದಲ್ಲಿ 40 ರೈತ/ರೈತ ಮಹಿಳೆಯರು ಭಾಗವಹಿಸಿದ್ದರು.

## ಮಾದರಿ ಸಮಗ್ರ ಕೃಷಿ ಪದ್ದತಿಯನ್ನು ಅಳವಡಿಸುವ ಕುರಿತು ಕಾರ್ಯಗಾರ



ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಹಾಗೂ ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ವತಿಯಿಂದ ತಿಪಟೂರು ತಾಲ್ಲೂಕು, ಹುಲುಕಟ್ಟೆ ಕೊಪ್ಪ ಗ್ರಾಮಗಳನ್ನು ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಯೋಜನೆಯಡಿ ದತ್ತು ಗ್ರಾಮಗಳನ್ನಾಗಿ ಸ್ವೀಕರಿಸಿದ್ದು ಇದರ ಪ್ರಯುಕ್ತ ದಿನಾಂಕ .01–09–2017 ರಂದು ಆಯ್ದ 25 ರೈತ ಮತ್ತು ರೈತ ಮಹಿಳೆಯರಿಗೆ ಮಾದರಿ ಸಮಗ್ರ ಕೃಷಿ ಪದ್ದತಿಯನ್ನು ಅಳವಡಿಸುವ ಕುರಿತು ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಯೋಜನೆಯಡಿ ಪ್ಲಸ್ ಟ್ರಸ್ಟ್, ಬೆಂಗಳೂರು ಇವರ ವತಿಯಿಂದ ಮಾದರಿ ಸಮಗ್ರ ಕೃಷಿ ಪದ್ದತಿ ಕುರಿತು ರೈತರ ಮಾಹಿತಿ ಪ್ರಕಾರ ವಿಶ್ಲೇಶಿಸಿ ಅಳವಡಿಸುವ ಕುರಿತು ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ನಿವೃತ್ತ ಸಂಶೋಧನಾ ನಿರ್ದೇಶಕರು ಹಾಗೂ ಪ್ಲಸ್ ಟ್ರಸ್ಟ್, ಬೆಂಗಳೂರು ಅಧ್ಯಕ್ಷರಾದ

ಡಾ. ಟಿ .ಕೆ. ಪ್ರಭಾಕರ ಶೆಟ್ಟಿಯವರು ವೈಯಕ್ತಿಕವಾಗಿ ರೈತರೊಡನೆ ಸಮಲೋಚನೆ ನೆಡೆಸಿ ಪ್ರತಿ ರೈತರಿಗೂ ಮಾದರಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸುವ ಕುರಿತು ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಆಯ್ದ ರೈತರಿಗೆ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಮಣ್ಣು ಆರೋಗ್ಯ ಚೀಟಿಯನ್ನು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರಾದ ಡಾ. ಟಿ.ಎಸ್. ಸುಕನ್ಯ ರವರು ವಿತರಿಸಿದರು. ಕೇಂದ್ರದ ವತಿಯಿಂದ ಸದರಿ ಗ್ರಾಮದಲ್ಲಿ ಪಶು ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಂಡು ಸುಮಾರು 125 ಪಶುಗಳಿಗೆ ತಪಾಸಣೆ ಮಾಡಿ ಲಸಿಕೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ತಿಪಟೂರು ತಾಲ್ಲೂಕಿನ ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ ಜಯಪ್ಪ, ಕೃಷಿ ಅಧಿಕಾರಿಯಾದ ಶ್ರೀಮತಿ ರೂಪಶ್ರೀ, ತೋಟಗಾರಿಕೆ ಇಲಾಖೆಯ ಸಹಾಯಕ ತೋಟಗಾರಿಕೆ ಅಧಿಕಾರಿಯಾದ ಶ್ರೀಮತಿ ಸುಪ್ರಿಯಾ, ಆರ್ಥಿಕ ಸಾಕ್ಷರತಾ ಸಂಸ್ಥೆ ತಿಪಟೂರಿನ ಶ್ರೀಮತಿ ರೇಖಾ, ಪ್ಲಸ್ ಟ್ರಸ್ಟ್ ಬೆಂಗಳೂರಿನ ಶ್ರೀ ಸತ್ಯಪ್ರಕಾಶ್, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಹಾಗೂ ಸುಮಾರು 40 ರೈತ/ ರೈತ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ವಿಶ್ವ ಮಣ್ಣು ಆರೋಗ್ಯ ದಿನಾಚರಣೆ–2017



ದಿನಾಂಕ 05.12.2017 ರಂದು ತಿಪಟೂರು ತಾಲ್ಲೂಕಿನ ನೊಣವಿನಕೆರೆ ಗ್ರಾಮದಲ್ಲಿ ಐ.ಸಿ.ಎ.ಆರ್ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಹಾಗೂ ಕೃಷಿ ಇಲಾಖೆ, ತಿಪಟೂರು ಸಹಯೋಗದೊಂದಿಗೆ ವಿಶ್ವ ಮಣ್ಣು ಆರೋಗ್ಯ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ತಿಪಟೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ಕೆ.ಷಡಕ್ಷರಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿ ಕೃಷಿ ಉತ್ಪಾದನೆಯಲ್ಲಿ ಮಣ್ಣಿನ ಮಹತ್ವ ಹಾಗೂ ಸಮಗ್ರ ನಿರ್ವಹಣೆ ಕುರಿತು ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲೆ, ತಾಲ್ಲೂಕು ಹಾಗು ಗ್ರಾಮ ಪಂಚಾಯಿತಿಯ ಜನಪ್ರತಿನಿದಿಗಳು, ವಿವಿಧ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಮತ್ತು ಸುಮಾರು 700 ರೈತ/ ರೈತ ಮಹಿಳೆಯರು ಭಾಗವಹಿಸಿದ್ದರು.

### ಒಳ ಆವರಣ ತರಬೇತಿ ಕಾರ್ಯಕ್ರಮ

| ಕ್ರ.ಸಂ. | ವಿಷಯ | ದಿನಾಂಕ | ಒಟ್ಟು |
|---|---|---|---|
| 1 | ಹೆಸರಿನಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ | 19/5/17 | 12 |
| 2 | ಶೈಕ್ಷಣಿಕ ಪ್ರವಾಸ | 20–21/7/17 | 18 |
| 3 | ಅರಣ್ಯ ಕೃಷಿ ಮತ್ತು ಸಮಗ್ರ ಕೃಷಿ ಪದ್ಧತಿ | 26/7/17 | 20 |
| 4 | ತೆಂಗಿನಲ್ಲಿ ಮರವನ್ನು ಹತ್ತುವ ಪ್ರಾತ್ಯಕ್ಷಿಕೆ ಹಾಗು ಸಮಗ್ರ ಬೆಳೆ ನಿರ್ವಹಣೆ | 9–11/8/17 | 25 |
| 5 | ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ಬೆಳೆ ಪೋಷಕಾಂಶಗಳ ಹಾಗು ಪೀಡೆ ನಿರ್ವಹಣೆ | 5–6/9/17 | 32 |
| 6 | ಖುಷ್ಕಿ ಜಮೀನಿನಲ್ಲಿ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ನಿರ್ವಹಣೆ | 12–14/9/17 | 18 |
| 7 | ಕೃಷಿ ಬೆಳೆಯ ಕೀಟ ಪ್ರಪಂಚದ ಸಮಗ್ರ ಮಾಹಿತಿ | 10/10/17 | 50 |
| 8 | ಹೈನುಗಾರಿಕೆಯಲ್ಲಿ ವೈಜ್ಞಾನಿಕ ತಾಂತ್ರಿಕತೆಗಳು ಮತ್ತು ಸಮಗ್ರ ರೋಗ ನಿರ್ವಹಣೆ | 23/10/17 | 49 |
| 9 | ಕೃಷಿ ಮತ್ತು ತೋಟಗಾರಿಕ ಬೆಳೆಗಳಲ್ಲಿ ಸಮಗ್ರ ಪೀಡೆ/ಬೆಳೆ ನಿರ್ವಹಣೆ | 28/11/17 | 45 |
| 10 | ಅಡಿಕೆ ಮತ್ತು ಬಾಳೆಯಲ್ಲಿ ಸುಧಾರಿತ ಉತ್ಪಾದನಾ ತಾಂತ್ರಿಕತೆಗಳು | 29/11/17 | 19 |
| 11 | ಕೃಷಿ ಉದ್ದಿಮೆಯಲ್ಲಿ ಯುವಕರ ಪಾತ್ರ | 29/11/17 | 51 |
| 12 | ಕೃಷಿ ಉದ್ದಿಮೆಯಲ್ಲಿ ಯುವಕರ ಪಾತ್ರ | 30/11/17 | 49 |
| 13 | ಏಕದಳ ಬೆಳೆಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ | 7/11/17 | 26 |
| 14 | ಗ್ರಾಮಭಿವೃದ್ಧಿಯಲ್ಲಿ ಯುವ ರೈತರ ಪಾತ್ರ | 18/12/17 | 40 |

## ಹೊರ ಆವರಣ ತರಬೇತಿ ಕಾರ್ಯಕ್ರಮಗಳು

| ಕ್ರಮ ಸಂಖ್ಯೆ | ವಿಷಯ | ದಿನಾಂಕ | ಸ್ಥಳ | ಒಟ್ಟು |
|---|---|---|---|---|
| 1. | ರಾಗಿ ಬೆಳೆಯ ಸಮಗ್ರ ಬೆಳೆ ನಿರ್ವಹಣೆ | 4/7/17 | ಪಟ್ರೆಹಳ್ಳಿ | 63 |
| 2. | ಅಣಬೆ ಬೇಸಾಯ ಮತ್ತು ಮೌಲ್ಯವರ್ಧನೆ | 10/7/17 | ಮತ್ತಿಹಳ್ಳಿ | 16 |
| 3. | ರಾಗಿ ಬೆಳೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳು | 12/7/17 | ಗೆದ್ಲೆಹಳ್ಳಿ | 20 |
| 4. | ನವಣೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 12/7/17 | ಗೌಡನಕಟ್ಟೆ | 39 |
| 5. | ಅಜೋಲ ಉತ್ಪಾದನೆ | 13/7/17 | ಪಟ್ರೇಹಳ್ಳಿ | 22 |
| 6. | ಶಾಲೆಯಲ್ಲಿ ಪೌಷ್ಠಿಕ ಕೈತೋಟ | 18/7/17 | ಗೌಡನಕಟ್ಟೆ | 67 |
| 7. | ನವಣೆಯಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ | 1/8/17 | ಗೌಡನಕಟ್ಟೆ | 23 |
| 8. | ಶಾಲೆಯಲ್ಲಿ ಪೌಷ್ಠಿಕ ಕೈತೋಟ | 2/8/17 | ಕೊನೆಹಳ್ಳಿ | 85 |
| 9. | ಹೈನುಗಾರಿಕೆಯಲ್ಲಿ ಸಮಗ್ರ ಮೇವು ಮತ್ತು ರೋಗ ನಿರ್ವಹಣೆ | 24/8/17 | ಹುಲ್ಲುಕಟ್ಟೆ | 20 |
| 10. | ಕಿರುಧಾನ್ಯಗಳ ಅರಳಿನಿಂದ ಮೌಲ್ಯವರ್ಧಿದ ನ್ಯಾಕ್ ಬಾರ್ ರುಚಿಕರ ಉತ್ಪನ್ನ ತಯಾರಿಕೆ ಹಾಗು ವಿಶ್ಲೇಷಣೆ | 7/9/17 | ಗೌಡನಕಟ್ಟೆ | 31 |
| 11. | ಕೊಬ್ಬರಿಯ ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆ | 9/9/17 | ಕೆಂಕೆರೆ | 18 |
| 12. | ತೊಗರಿಯಲ್ಲಿ ಸಸ್ಯ ಸಂರಕ್ಷಣೆ | 26/9/17 | ಹಂದಲಕುಪ್ಪೆ | 28 |
| 13. | ರಾಗಿಯಲ್ಲಿ ಸಮಗ್ರ ಪೀಡೆ ನಿರ್ವಹಣೆ | 17/10/17 | ಗೆದ್ಲೆಹಳ್ಳಿ | 11 |
| 14. | ರಾಗಿಯಲ್ಲಿ ಎಂ.ಎಲ್.365 ತಳಿಯ ಬಳಕೆ | 2/11/17 | ಗೆದ್ಲೆಹಳ್ಳಿ | 18 |
| 15. | ಅಡಿಕೆಯಲ್ಲಿ ಸಮಗ್ರ ಬೆಳೆ ಮತ್ತು ಸಸ್ಯ ಸಂರಕ್ಷಣೆ | 9/11/17 | ಹುಲ್ಲುಕಟ್ಟೆ | 30 |
| 16. | ತೊಗರಿಕಾಯಿ ಕೊರತೆ ನಿರ್ವಹಣೆ | 10/11/17 | ಹಂದಲಕುಪ್ಪೆ | 34 |
| 17. | ಹಿತ್ತಲಕೋಳಿ ಸಾಕಾಣಿಕೆ ಹಾಗು ವೈಜ್ಞಾನಿಕ ನಿರ್ವಹಣೆ | 11/11/17 | ಕೊಪ್ಪ | 40 |
| 18. | ಕಡಲೆ ಬೆಳೆಯ ಸುಧಾರಿತ ತಳಿಗಳು | 13/11/17 | ದಬ್ಬೆಘಟ್ಟ | 15 |
| 19. | ಮಾವಿನ ಸಮಗ್ರ ಪೀಡೆ ನಿರ್ವಹಣೆ | 30/11/17 | ಹುಲುಕೆರೆ ಪಾಳ್ಯ, ತಿಮ್ಲಾಪುರ | 37 |
| 20. | ಆಧುನಿಕ ಹೈನುಗಾರಿಕ ಪದ್ಧತಿ ಹಾಗೂ ಆರ್ಥಿಕ ಸ್ಥಿತಿ | 1/12/17 | ಹುಳಿಯಾರು | 36 |
| 21. | ತೊಗರಿಯಲ್ಲಿ ಪೀಡೆ ನಾಶಕಗಳ ಸಮರ್ಪಕ ಬಳಕೆ | 11/12/17 | ಹಂದಲಕುಪ್ಪೆ | 22 |
| 22. | ಕೊಬ್ಬರಿಯ ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆ | 16/12/17 | ಕೆಂಕೆರೆ | 19 |

## ವಿಶೇಷ ಕಾರ್ಯಕ್ರಮಗಳು

| ಕ್ರಮ ಸಂಖ್ಯೆ | ವಿಷಯ | ದಿನಾಂಕ | ಸ್ಥಳ | ಒಟ್ಟು |
|---|---|---|---|---|
| 1. | ವಿಶ್ವ ಜೇನು ದಿನ | 19/8/17 | ಪಟ್ರೆಹಳ್ಳಿ | 60 |
| 2. | ಪಶು ಆರೋಗ್ಯ ತಪಾಸಣಾ ಶಿಬಿರ | 1/9/17 | ಹುಲುಕಟ್ಟೆ | 37 |
| 3. | ರಾಷ್ಟ್ರೀಯ ಪೌಷ್ಠಿಕ ಆಹಾರ ಸಪ್ತಾಹ | 8/9/17 | ಎ.ಪಿ.ಎಂ.ಸಿ,ತಿಪಟೂರು | 49 |
| 4. | ಸರ್ವತ್ರ ಸ್ವಚ್ಛತ ಅಭಿಯಾನ – ಶಾಲಾ ಮಕ್ಕಳಿಗೆ ಅರಿವು ಕಾರ್ಯಕ್ರಮ | 23/9/17 | ಕೊನೆಹಳ್ಳಿ | 121 |
| 5. | ಸರ್ವತ್ರ ಸ್ವಚ್ಛತಾ ದಿನ | 26/9/17 | ಹೊನ್ನವಳ್ಳಿ | 124 |
| 6. | ಸ್ವಚ್ಛ ಭಾರತ ಆಂದೋಲನ – ಜಾತಾ | 27/9/17 | ಗೌಡನಕಟ್ಟೆ | 81 |
| 7. | ಯಾತ್ರಾ ಸ್ಥಳಗಳಲ್ಲಿ ಸ್ವಚ್ಛತೆ ಅರಿವು ಕಾರ್ಯಕ್ರಮ | 3/10/17 | ಬಿದರೆಗುಡಿ | 47 |
| 8. | ಪಶು ಆರೋಗ್ಯ ತಪಾಸಣ ಶಿಬಿರ ಮತ್ತು ಮಿಶ್ರ ತಳಿ ಕರುಗಳ ಪ್ರದರ್ಶನ | 7/10/17 | ಬಿಳಿಗೆರೆ | 113 |
| 9. | ಆರೋಗ್ಯ ತಪಾಸಣಾ ಶಿಬಿರ | 10/10/17 | ಹುಲ್ಲುಕಟ್ಟೆ ಕೊಪ್ಪ | 23 |
| 10. | ವಿಶ್ವ ಆಹಾರ ಮತ್ತು ರೈತ ಮಹಿಳಾ ದಿನ | 16/10/17 | ಬಳುವನೆರಲು | 98 |
| 11. | ಕ್ಷೇತ್ರೋತ್ಸವ – ಕೆ.ವಿ.ಕೆ ಮತ್ತು ಎ.ಆರ್.ಎಸ್ ಕ್ಷೇತ್ರ | 30/10/17 | ಕೆ.ವಿ.ಕೆ, ಕೊನೆಹಳ್ಳಿ | 63 |
| 12. | ರಾಗಿ ಬೆಳೆ ಕ್ಷೇತ್ರೋತ್ಸವ | 8/11/17 | ಗೆದ್ಲೆಹಳ್ಳಿ | 67 |
| 13. | ನವಣೆ ಬೆಳೆಯಲ್ಲಿ ಕ್ಷೇತ್ರೋತ್ಸವ | 8/11/17 | ಗೌಡನಕಟ್ಟೆ | 29 |
| 14. | ಕೃಷಿ ನಿರತ ರೈತ ಮಹಿಳಾ ದಿನಾಚರಣೆ | 4/12/17 | ಹಾಲ್ಕುರಿಕೆ | 60 |
| 15. | ವಿಶ್ವ ಮಣ್ಣು ದಿನ | 5/12/17 | ನೊಣವಿನಕೆರೆ | 467 |
| 16. | ಹರಳು – ಕ್ಷೇತ್ರೋತ್ಸವ | 15/12/17 | ಕಲ್ಲಹಳ್ಳಿ | 77 |
| 17. | ತೊಗರಿಬೇಳೆಯಲ್ಲಿ ಕ್ಷೇತ್ರೋತ್ಸವ | 20/12/17 | ಹಂದಲಕುಪ್ಪೆ | 98 |
| 18. | ರೈತ ದಿನಾಚರಣೆ | 23/12/17 | ತಿಪಟೂರು | 270 |

| | | |
|---|---|---|
| <br>ವಿಶ್ವ ತೆಂಗು ದಿನಾಚರಣೆ,<br>ಕೆ.ವಿ.ಕೆ., ಕೊನೇಹಳ್ಳಿ<br>(ದಿನಾಂಕ.05–09–2017) | <br>ಕಿರುಧಾನ್ಯಗಳ ಅರಳಿನಿಂದ ಮೌಲ್ಯವರ್ಧಿತ<br>ಸ್ನ್ಯಾಕಬಾರ್, ರುಚಿಕರ ಉತ್ಪನ್ನ ತಯಾರಿಕೆ ಹಾಗೂ<br>ವಿಶ್ಲೇಷಣೆ ಬಗ್ಗೆ ತರಬೇತಿ,<br>ಗೌಡನಕಟ್ಟೆ ಗ್ರಾಮ (ದಿನಾಂಕ.05–09–2017) | <br>ಸ್ವಚ್ಛತಾ ಸೇವೆ ಕಾರ್ಯಕ್ರಮ,<br>ಕೆ.ವಿ.ಕೆ., ಕೊನೇಹಳ್ಳಿ<br>(ದಿನಾಂಕ.22–09–2017) |
| <br>ಸ್ವಚ್ಛತಾ ಸೇವೆ ಕಾರ್ಯಕ್ರಮ,<br>ಕನ್ನಡ ಭಾರತ ಪೌಢ ಶಾಲೆ, ಹೊನ್ನವಳ್ಳಿ<br>(ದಿನಾಂಕ.26–09–2017) | <br>ಸ್ವಚ್ಛತಾ ಸೇವೆ ಕಾರ್ಯಕ್ರಮ,<br>ಬಿದರೇಗುಡಿ<br>(ದಿನಾಂಕ.03–10–2017) | <br>ವಿಶ್ವ ಆಹಾರ ದಿನಾಚರಣೆ ಮತ್ತು ಮಹಿಳಾ ಕಿಸಾನ್ ದಿವಸ್<br>ಬಳುವನೇರಲು ಗ್ರಾಮ,<br>(ದಿನಾಂಕ 16–10–2017) |
| <br>"ನವಣೆ ಬೆಳೆಯ ಕ್ಷೇತ್ರೋತ್ಸವ"<br>ಗೌಡನಕಟ್ಟೆ ಗ್ರಾಮ<br>(ದಿನಾಂಕ 08–11–2017 ) | <br>"ಸಮಗ್ರ ಕೃಷಿ ಪದ್ಧತಿ" ಕಾರ್ಯಕ್ರಮ<br>ಹುಲ್ಲುಕಟ್ಟೆಕೊಪ್ಪ ಗ್ರಾಮ<br>(ದಿನಾಂಕ 09–11–2017) | <br>"ತೊಗರಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ" ಯಲ್ಲಿ ಮೋಹಕ<br>ಬಲೆಗಳ ಪ್ರಾತ್ಯಕ್ಷಿಕೆ<br>ಹಂದಲಗುಪ್ಪೆ ಗ್ರಾಮ, (ದಿನಾಂಕ 10–11–2017) |
| <br>"ರಾಗಿ ಬೆಳೆಯ ಕ್ಷೇತ್ರೋತ್ಸವ"<br>ಗೆದ್ಲೆಹಳ್ಳಿ ಗ್ರಾಮ<br>(ದಿನಾಂಕ 08–11–2017 ) | <br>"ಹರಳು ಬೆಳೆಯ ಕ್ಷೇತ್ರೋತ್ಸವ"<br>ಪಿ. ಕಲ್ಲಹಳ್ಳಿ ಗ್ರಾಮ<br>(ದಿನಾಂಕ 15–12–2017 ) | <br>"ತೊಗರಿ ಬೆಳೆಯ ಕ್ಷೇತ್ರೋತ್ಸವ"<br>ಹಂದಲಕುಪ್ಪೆ ಗ್ರಾಮ<br>(ದಿನಾಂಕ 20–12–2017 ) |

| | | |
|---|---|---|
| ಸಂಪಾದಕರು | : | ಡಾ॥ ಟಿ.ಎಸ್. ಸುಕನ್ಯ |
| ಸಂಪಾದಕೀಯ ಸದಸ್ಯರು | : | ಶ್ರೀ. ಎಂ. ಹೆಚ್. ಶಂಕರ<br>ಡಾ. ಕೆ.ಆರ್.ಶ್ರೀನಿವಾಸ<br>ಶ್ರೀ. ನಾಗಪ್ಪ ದೇಸಾಯಿ<br>ಡಾ. ಬಿ. ಮಮತಾ<br>ಶ್ರೀಮತಿ ರೂಪ ಬಿ ಪಾಟಿಲ್<br>ಡಾ. ಹೆಚ್.ಬಿ. ಶಿವಪ್ಪ ನಾಯಕ |
| ಸಹಾಯಕ ಸಂಪಾದಕೀಯ ಸದಸ್ಯರು ,<br>ಪುಟ ವಿನ್ಯಾಸ & ಅಕ್ಷರ ಜೋಡಣೆ | : | ಶ್ರೀ. ಪ್ರದೀಪ್ ಕುಮಾರ್ ಹೆಚ್ |

ಪ್ರಕಾಶಕರು:
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,
ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ತುಮಕೂರು ಜಿಲ್ಲೆ